ದಿನಾಂಕಃ 03-04-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಬಿ. ಕೆ. ಎಸ್. ವಕೀಲರಿಂದ

1. ನನ್ನ ಬಳಿ ಚಾಲನಾ ಪರವಾನಿಗೆ ಇತ್ತು ಅಪಘಾತದಲ್ಲಿ ಕಳೆದುಹೋಯಿತು. ನಾನು ತುರುವೆಕೆರೆ ಆರ್.ಟಿ.ಓ. ನಲ್ಲಿ ಚಾಲನಾ ಪರವಾನಿಗೆ ಪಡೆದಿದ್ದೆ. ನನ್ನ ಬಳಿ ಚಾಲನಾ ಪರವಾನಿಗೆ ಪುಸ್ತಕ ಇತ್ತು. ಅಪಘಾತ ಆಗುವ 2 ವರ್ಷಗಳ ಮೊದಲೇ ಚಾಲನಾ ಪರವಾನಿಗೆ ಮಾಡಿಸಿದ್ದೆ. ಈಗಲೂ ನಾನು ಬೈಕ್ ಚಾಲನೆ ಮಾಡುತ್ತಿದ್ದೇನೆ. ನಾನು ಚಾಲನಾ ಪರವಾನಿಗೆ ಕಳೆದು ಹೋಗಿದೆ ಚಾಲನಾ ಪರವಾನಿಗೆ ಪ್ರತಿ ಕೊಡುವಂತೆ ಅರ್ಜಿ ಕೊಟ್ಟಿಲ್ಲ. ಚಾಲನಾ ಪರವಾನಿಗೆ ಇಲ್ಲದೆ ವಾಹನ ಚಲಾಯಿಸಬಾರದು ಎನ್ನುವ ನಿಯಮ ಗೊತ್ತು. ನನಗೆ ಚಾಲನಾ ಪರವಾನಿಗೆ ಇಲ್ಲ, ಅಪಘಾತ ಆದ ದಿನ ಕಳೆದು ಹೋಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತವಾದ ಸ್ಥಳ ಹೆದ್ದಾರಿಯಾಗಿದ್ದು ಹೆಚ್ಚಿನ ವಾಹನಗಳು ಸಂಚರಿಸುತ್ತವೆ ಎನ್ನುವುದು ಸರಿ. ಆ ದಿನ ನಾನು ರಸ್ತೆಯ ಎಡಭಾಗದಲ್ಲಿ 30 – 40 ಕಿ. ಮೀ. ವೇಗದಲ್ಲಿ ಹೋಗುತ್ತಿದ್ದೆ. ಹಿಂಬದಿ ಚಾಲಕರಾಗಿದ್ದ ಗಂಗಾಧರಯ್ಯ ರವರಿಗೂ ಸಹ ಗಾಯಗಳು ಆಗಿದ್ದವು. ಅವರು ಪರಿಹಾರಕ್ಕೆ ಬೆಂಗಳೂರಿನಲ್ಲಿ ಅರ್ಜಿ ಹಾಕಿದ್ದಾರೆ. ಆ ದಿನ ನಾನು ತುಂಬಾ ವೇಗದಲ್ಲಿ ಬೈಕ್ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ಆ ದಿನ ನಾನು ಯಾವುದೇ ಸೂಚನೆ ಕೊಡದೆ ನನ್ನ ಬೈಕ್ ನ್ನು ಏಕಾಏಕಿ ಬಲಭಾಗಕ್ಕೆ ತಿರುಗಿಸಿ ತಕ್ಷಣ ನಿಲ್ಲಿಸಿದೆ ಆ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಕಾರ್ ಚಾಲಕರೇ ಡಿಕ್ಕಿ ಪಡಿಸಿರುತ್ತಾರೆ. ಅಪಘಾತ ನನ್ನ ನಿರ್ಲಕ್ಷತೆಯಿಂದ ಆಗಿದೆ ಎಂದರೆ ಸರಿಯಲ್ಲ. ನಂತರ ನಾನು ಪೋಲೀಸರಿಗೆ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ಚುಂಚನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ಗೊತ್ತಿಲ್ಲ. ಈಗ ಆರು ತಿಂಗಳಿನಿಂದ ವೈದ್ಯರ ಬಳಿ ಹೋಗಿಲ್ಲ. ಹೊರರೋಗಿ ಪುಸ್ತಕ ಕೊಟ್ಟಿದ್ದರು. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಹಾಲು ಉತ್ಪಾದಕ ಸಂಘದ ಕಾರ್ಯದರ್ಶಿಯೊಂದಿಗೆ ಷರೀಕಾಗಿ ಬಿಲ್ ಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಒಂದು ಎಕರೆ ತೋಟ ಒಂದು ಎಕರೆ ಹೊಲ ಇದೆ. ನನಗೆ ಒಬ್ಬಳೇ ಮಗಳು. ನನಗೆ ಜಮೀನಿನಿಂದ ಈಗಲೂ ಆದಾಯ ಬರುತ್ತಿದ್ದು, ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಿಪಿ.3 ರ ಆಸ್ತಿ ದಾಸೇಗೌಡರಿಗೆ ಸೇರಿದ್ದು ಎಂದರೆ ಸರಿಯಲ್ಲ. ಔಷಧಿಗೆ ರೂ. 2 ಲಕ್ಷ ಹಣ ಖರ್ಚು ಮಾಡಿರುವುದಾಗಿ ಬಿಲ್ ಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತದ ಮೊದಲು ದುಡಿಮೆ ಮಾಡುತ್ತಿದ್ದಂತೆ ಈಗಲೂ ಸಹ ದುಡಿಮೆ ಮಾಡುತ್ತಿದ್ದರಿಂದ ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರಿಂದ ಎದುರುದಾರರು ಪರಿಹಾರ ಕೊಡುವ ಭಾದ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ.,
ನಾಗಮಂಗಲ.

ಸಾಕ್ಷಿದಾರರ ಸಹಿ: